ಪ್ರತಿಬಿಂಬ

**PRATIBIMBA–Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 96-98.**
**©IIMRD, Mysuru.**
IIMRD JOURNALS

**www.iimrd.com**

# ಪ್ರಗತಿಶೀಲ ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ಪ್ರಜ್ಞೆ

**ಶ್ರೀಧರ್ ಡಿ. ಎನ್***

*ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು.

***ಸಾರಾಂಶ:* (Abstract)**

*ಹೊಸಗನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಎರಡು ಘಟ್ಟಗಳನ್ನು ಕಾಣುತ್ತೇವೆ. ಅವುಗಳೆಂದರೆ ನವೋದಯ ಮತ್ತು ನವ್ಯ ಸಾಹಿತ್ಯ. ಇವುಗಳ ನಡುವೆ ಪ್ರಗತಿಶೀಲ ಸಾಹಿತ್ಯ ಕೂಡ ಕಂಡುಬರುತ್ತದೆ. ಆದರೆ ಇದನ್ನು ಸ್ವತಂತ್ರ ಪ್ರಸ್ಥಾನವೆಂದು ಪರಿಗಣಿಸದೆ, ಕೇವಲ ಸಂಧಿಸ್ಥಿತಿ ಎಂದು ಭಾವಿಸುವವರೂ ಇದ್ದಾರೆ. 1940ರಿಂದ 1950ರ ವರೆಗೆ ಪ್ರಗತಿಶೀಲ ಸಾಹಿತ್ಯದ ಹರವು ಕಂಡುಬರುತ್ತದೆ. ಇದು ನವೋದಯ ಸಾಹಿತ್ಯದ ಮುಂದಿನ ಮಜಲು ಮತ್ತು ನವೋದಯಕ್ಕೆ ಪ್ರತಿಭಟನೆಯಾಗಿ ತಲೆಯೆತ್ತಿದ್ದು. ಮುಂದೆ ಪ್ರಗತಿಶೀಲ ಸಾಹಿತ್ಯ ಎರಡು ಕವಲುಗಳಾಗಿ ಒಡೆದು, ಒಂದು ಮತ್ತೆ ನವೋದಯದಲ್ಲೂ ಇನ್ನೊಂದು ನವ್ಯದಲ್ಲೂ ವಿಲೀನವಾದುವು. ನವೋದಯ ಪಂಥ ಬಹುಮಟ್ಟಿಗೆ ಕಾವ್ಯ ಪ್ರಕಾರಕ್ಕೆ ಸಂಬಂಧಿಸಿದ್ದರೆ, ಪ್ರಗತಿಶೀಲ ಪಂಥಕತೆ, ಕಾದಂಬರಿಗಳಿಗೆ ಸೀಮಿತವಾಯಿತು ಎಂಬುದು ಗಮನಾರ್ಹ. ಪ್ರಸ್ತುತ ಲೇನದಲ್ಲಿ ಪ್ರಗತಿಶೀಲ ಕನ್ನಡ ಸಾಹಿತ್ಯದಲ್ಲಿನ ಐತಿಹಾಸಿಕ ಪ್ರಜ್ಞೆಯ ಬಗ್ಗೆ ವಿವರಿಸಿದ್ದಾರೆ.*

***ಮುಖ್ಯಪದಗಳು* (Keywords)** *ಪ್ರಗತಿ ಶೀಲ, ಪ್ರಜ್ಞೆ, ಕನ್ನಡ ಸಾಹಿತ್ಯ, ಚಳುವಳಿ, ಐತಿಹಾಸಿಕ.*

**ಪೀಠಿಕೆ**

ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಪ್ರಗತಿಶೀಲ ಸಾಹಿತ್ಯವು ಸ್ವಾತಂತ್ರ್ಯ ನಂತರವು ಸಹ ತನ್ನ ಪರಿಮಿತಿಯನ್ನು ವಿಸ್ತರಿಸಿತು. ಇಲ್ಲಿ ಐತಿಹಾಸಿಕ ಅಂಶಗಳನ್ನು ಒಳಗೊಂಡ ಕಥೆ, ಕಾದಂಬರಿಗಳನ್ನು ಗಮನಿಸಬಹುದು. ಅ.ನ.ಕೃ, ತ.ರಾ.ಸು, ನಿರಂಜನ ಮೊದಲಾದ ಲೇಖಕರಲ್ಲಿ ಈ ಪ್ರಜ್ಞೆಯನ್ನು ಮಾಡಿ ಮಡಿದವರು. ಚಿರಸ್ಮರಣೆ, ಜ್ವಾಲಾಮುಖಿಯ ಮೇಲೆ ಮೊದಲಾದ ಕೃತಿಗಳಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಕಾಣಬಹುದು. ಕೈಯೂರಿನ ವೀರರ ಬಲಿದಾನದ ಬಗೆಗಿನ ಅಂಶಗಳಲ್ಲಿ 'ಚಿರಸ್ಮರಣೆ' ಕಾದಂಬರಿಯಲ್ಲಿ ಐತಿಹಾಸಿಕ ಪ್ರಜ್ಞೆ ಚಿತ್ರಿತವಾಗಿದೆ. ತ.ರಾ.ಸು.ರವರ 'ಕಂಬನಿಯ ಕೊಯ್ಲು', 'ರಕ್ತರಾತ್ರಿ', 'ಹಂಸಗೀತೆ', 'ಸಿಡಿಲ ಮೊಗ್ಗು' ಇವು ಐತಿಹಾಸಿಕ ಕಾದಂಬರಿಗಳಾಗಿವೆ. ಪಾಳೆಗಾರಿಕೆಯಂತ ರಾಜಕೀಯ ಸಂಸ್ಥೆಗಳನ್ನು ಮಠದ ಅಂತಹ ಧಾರ್ಮಿಕ ಸಂಸ್ಥೆಗಳನ್ನು ವೈಭವೀಕರಿಸಿ ಅವುಗಳ ಧನಾತ್ಮಕ ಅಂಶಗಳನ್ನು ಇವುಗಳ ಮಧ್ಯೆ ಕಾಣಬಹುದು.

ಬಸವರಾಜ ಕಟ್ಟಿಮನೀಯವರ 'ಸಂಗೊಳ್ಳಿ ರಾಮನಾಯಕ', ನಿರಂಜನರ 'ಕಲ್ಯಾಣ ಸ್ವಾಮಿ', ಅಪರಂಪರ ಬ್ರಿಟಿಷರ ವಿರುದ್ಧದ ಅಸಹನೆಯ ಐತಿಹಾಸಿಕ ಅಂಶಗಳಿಂದ ಕೂಡಿವೆ. ನಕ್ಸಲಿಯ ಚಳುವಳಿಗಳ

*Please cite this article as:* ಶ್ರೀಧರ್ ಡಿ. ಎನ್. (2023). ಪ್ರಗತಿಶೀಲ ಕನ್ನಡ ಸಾಹಿತ್ಯದಲ್ಲಿ ಐತಿಹಾಸಿಕ ಪ್ರಜ್ಞೆ, ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.96–98.*

ಕುರಿತು ಕಾರ್ಮಿಕ, ಸಂಘಗಳ ಕುರಿತು, ಅವುಗಳ ಸ್ಥಿತಿಗತಿ, ರಾಜಕೀಯ ಚಳುವಳಿ ಹೀಗೆ ಐತಿಹಾಸಿಕ ವಿಚಾರಗಳನ್ನು ಇಲ್ಲಿ ಗಮನಿಸಬಹುದು. ಶ್ರೀರಂಗರ 'ಶೋಕಚಕ್ರ' ನಾಟಕವು ಮಹಾತ್ಮ ಗಾಂಧಿಯವರ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿನ ವಿಚಾರಗಳು, ಸ್ವಾತಂತ್ರ ಬಂದ ಸಂದರ್ಭದಲ್ಲಿ ಭಾರತದಲ್ಲಿನ ಹಳ್ಳಿಗಳ ಪರಿಸ್ಥಿತಿ, ಕೊಳಕು ರಾಜಕೀಯ, ಮಹಾತ್ಮ ಗಾಂಧಿಯವರ ಕೊಲೆಯೊಂದಿಗೆ ರಾಜಕೀಯದಲ್ಲಿ ಸತ್ಯದ ಕೊಲೆಯು ಸಹ ಆಗುವುದನ್ನು ಇದು ಚಿತ್ರಿಸುತ್ತದೆ. ತಮ್ಮ ಸ್ವಾರ್ಥ ಸಾಧನೆಗಾಗಿ ಗಾಂಧಿ ತತ್ವವನ್ನು ಬಳಸಿಕೊಂಡು ಕೊನೆಗೆ ಅದಕ್ಕೆ ವಿರೋಧವಾಗಿ ಅದರ ಮೇಲೆ ಅಸತ್ಯದ, ಮೋಸದ ರಾಜಕೀಯ ಸೌಧವನ್ನು ಕಟ್ಟುವಂತಹ ವ್ಯಕ್ತಿತ್ವವನ್ನು ಇಲ್ಲಿ ಚಿತ್ರಿಸಲಾಗಿದೆ. ಇದು ಒಟ್ಟಾರೆಯಾಗಿ ಸ್ವಾತಂತ್ರ್ಯ ನಂತರದ ಭಾರತದ ರಾಜಕೀಯ ಪರಿಸ್ಥಿತಿಯನ್ನು ಚಿತ್ರಿಸಿಕೊಡುತ್ತದೆ.

ತಾರಾಸುರವರ 'ದುರ್ಗಾಸ್ತಮಾನ' ಐತಿಹಾಸಿಕ ಕಾದಂಬರಿಯಾಗಿದೆ. ಇದಕ್ಕೆ 1985ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಚಿತ್ರದುರ್ಗದ ಪಾಳೇಗಾರರ ಕುರಿತಾದ 8 ಐತಿಹಾಸಿಕ ಕಾದಂಬರಿಗಳಲ್ಲಿ 'ಕಂಬನಿಯ ಕೊಯ್ಲು', 'ತಿರುಗುಬಾಣ', 'ರಕ್ತರಾತ್ರಿ', 'ದುರ್ಗಾಸ್ತಮಾನ', 'ಶಿಖರ ಪ್ರಾಯ' ಕಾದಂಬರಿಗಳಾಗಿವೆ. ತಾ.ರಾ.ಸು.ರವರ ಐತಿಹಾಸಕ ಕಾದಂಬರಿ ಶಕ್ತಿಯು ದುರ್ಗಾಸ್ತಮಾನ ಕಾದಂಬರಿಯಲ್ಲಿ ಉತ್ತುಂಗಕ್ಕೆ ಏರಿದೆ. ಇದು ಚಿತ್ರದುರ್ಗದ ಮದಕರಿ ನಾಯಕನ ಚರಿತ್ರೆಯಾಗಿದೆ. ಮದಕರಿನಾಯಕ ಭಾರತೀಯ ಇತಿಹಾಸದಲ್ಲಿ ಒಂದು ಚಿಕ್ಕ ಗುರುತು ಆದರೆ, ಈ ಕಾದಂಬರಿಯಲ್ಲಿ ಆತನದೆ ಮುಖ್ಯ ಪಾತ್ರ. ಜಾನಕಲ್ಲು ದುರ್ಗದ ಬರಮಪ್ಪನಾಯಕನ ಮಗ ಮದಕರಿನಾಯಕ ಮಕ್ಕಳಿಲ್ಲದೆ ಸಾಯುವ ಕಸ್ತೂರಿ ರಂಗಪ್ಪ ನಾಯಕ ನಂತರ ಚಿತ್ರದುರ್ಗದ ನಾಯಕನಾಗಿರುತ್ತಾನೆ. ಆತನು ಪ್ರಧಾನ ಮಂತ್ರಿ ಕಳ್ಳಿ ನರಸಪ್ಪಯ್ಯ ಮತ್ತು ಸತ್ತಂತಹ ರಾಜನ ತಾಯಿಯಿಂದ ತರಬೇತಿಯನ್ನು ಪಡೆದಿರುತ್ತಾರೆ.

ಮದಕರಿ ನಾಯಕನ ಕಥೆಯಲ್ಲಿ ಹೈದರಾಲಿಯು ಎಲ್ಲಾ ರಾಜ್ಯಗಳನ್ನು ಮೋಸ ಮತ್ತು ಶೌರ್ಯದಿಂದ ಗೆದ್ದು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಪದೇ ಪದೇ ಮದಕರಿ ನಾಯಕನಿಗೆ ಆತ ದ್ರೋಹ ಬಗೆಯುತ್ತಾನೆ ಇದರಿಂದ ಮದಕರಿ ನಾಯಕ ಕಠಿಣ ಪಾಠ ಕಲಿಯುತ್ತಾನೆ ಮತ್ತು ತನ್ನ ಹಾದಿ ಬದಲಿಸುತ್ತಾನೆ. ತಾ.ರಾ.ಸು. ಚಿತ್ರದುರ್ಗ ಮತ್ತು ಕರ್ನಾಟಕದ ವೀರಹೃದಯ ಮದಕರಿನಾಯಕನ ಕಥೆಯನ್ನು ಹೇಳುವಾಗ ಎಂತಹ ಶಕ್ತಿಯುತ ಚಿತ್ರಣ ಸೃಷ್ಟಿಸುತ್ತಾರೆ ಎಂದರೆ ಅವರು ತನ್ನ ಬಂಧುಗಳಿಂದಲೇ ವಂಚನೆಗೆ ಒಳಗಾದಾಗ ಮತ್ತು ಅಂತಿಮವಾಗಿ ಸ್ವಂತ ಲೆಫ್ಟಿನೆಂಟ್‌ನಿಂದ ಮದಕರಿನಾಯಕ ತನ್ನ ರಾಜ್ಯಕ್ಕಾಗಿ ಏಕಾಂಗಿಯಾಗಿ ಹೋರಾಡುತ್ತಾನೆ. ಹೈದರಾಲಿ ಮತ್ತು ಅವನ ನಂಬಿಕಸ್ತ ಪ್ರಧಾನಿ ಪೂರ್ಣಯ್ಯ ಅವರು ಸುಳ್ಳು ಮತ್ತು ಮೋಸದ ಜಾಲವನ್ನು ಬೀಸಿದರು ಜಿಹಾದ್ನ ಸೋಗಿನಲ್ಲಿ ಚಿತ್ರದುರ್ಗದ ಜನರ ಒಗ್ಗಟ್ಟನ್ನು ನಾಶ ಮಾಡಿದರು ಮತ್ತು ಚಿತ್ರದುರ್ಗವನ್ನು ಗೆದ್ದರು. ರಾತ್ರಿ ತನ್ನ ಪ್ರೀತಿಯ ಚಿತ್ರದುರ್ಗವನ್ನು ರಕ್ಷಿಸಲು ಮದಕರಿನಾಯಕನು ಹೋರಾಡುತ್ತಾನೆ ಮತ್ತು ಅವನ ಸಹೋದರ ಅಣ್ಣ ಅಣ್ಣ ಮದಕರಿ ಅಣ್ಣ ಎಂಬ ಕೂಗಿನಿಂದ ಯುದ್ಧಭೂಮಿಯಲ್ಲಿ ಪ್ರೇತದಂತೆ ತಿರುಗುತ್ತದೆ.

ಅ.ನ.ಕೃ. ರವರ ಐತಿಹಾಸಿಕ ವಿಷಯಗಳು 'ಬಸವೇಶ್ವರ ನಾಟಕ'. ಇಲ್ಲಿ ಅವರನ್ನು ದಯೆ ಸಹನೆಯ ಸಂಯಮದ ತ್ಯಾಗದ ಗುಣವನ್ನು ಎತ್ತಿ ತೋರಿಸಿ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಬಸವೇಶ್ವರ ಎಂದು ಹೇಳಿದ್ದಾರೆ. ಬಿಜ್ಜಳನನ್ನು ಬಸವೇಶ್ವರರ ಹಿತೈಷಿಯಂತೆ ಚಿತ್ರಿಸಲಾಗಿದೆ. ಮಂಚಣ್ಣನಂತಹವರು

ಬಸವಣ್ಣನವರನ್ನು ದೂರಿ ಸಚಿವ ಸ್ಥಾನ ಆಕ್ರಮಿಸಲು ಪ್ರಯತ್ನಿಸಿದಾಗಲೂ ಬಿಜ್ಜಳನು ಬಸವಣ್ಣನನ್ನು ಬಿಟ್ಟು ಕೊಡುವುದಿಲ್ಲ ಆದರೆ ಹರಳಯ್ಯ ಮಧುವರಸರ ಪ್ರಕರಣದಲ್ಲಿ ಮಾತ್ರ ಬಸವಣ್ಣನ ನಿಲುವನ್ನು ಧುರೀಕರಿಸಿ ಆಪತ್ತು ತಂದುಕೊಳ್ಳುತ್ತಾನೆ. ಮನಸ್ಸಿನಲ್ಲಿ ದ್ವೇಷಕ್ಕೆ ಎಡೆಕೊಡದೆ ಪ್ರೇಮ ಮೂರ್ತಿಗಳಾಗಿದ್ದ ಯೇಸು, ಬುದ್ಧ ಗಾಂಧೀಜಿ ಇವರ ಪಂಕ್ತಿಯಲ್ಲಿ ಬಸವಣ್ಣನವರು ಕೂರತಕ್ಕವರು ಎಂಬ ಧೋರಣೆಯಂತೆ ಬಸವಣ್ಣನವರ ವ್ಯಕ್ತಿತ್ವ ಉನ್ನತ ಶಿಖರಕ್ಕೇರಿದೆ. ವಿಜಯನಗರದ ಅರಸು ಮನೆತನ ಕೊನೆಗೊಳ್ಳುವ ಹಂತದಲ್ಲಿ ಬೆಂಗಳೂರಿನಲ್ಲಿ ಕೆಂಪೇಗೌಡ ಅವರ ಅಧೀನ ಪಾಳೇಗಾರನಾಗಿದ್ದನು. ಆತ ಯುದ್ಧ ಕೌಶಲ ಮತ್ತು ಪ್ರಜಾ ಪ್ರೇಮದಿಂದ ಹೆಸರಾಗಿದ್ದ. ಆತನಿಗೆ ವಿಜಯನಗರದ ಮೇಲೆ ಅತಿ ಬಪ್ಪಿ ಬೆಂಗಳೂರು ನಗರ ವಿಸ್ತರಣೆ ಮತ್ತು ಅಭಿವೃದ್ಧಿಯ ಯೋಜನೆ ಹಮ್ಮಿಕೊಂಡು ಹಣಕಾಸಿನ ಹೊಂದಿಕೆಗಾಗಿ ನಾಣ್ಯ ಮುದ್ರಿಸಲು ವಿಜಯನಗರದ ಅರಸರಿಂದ ಅನುಮತಿ ಪಡೆದನು.

ಬೆಂಗಳೂರಿನ ಹೆಬ್ಬಾಗಿಲು ನಿಲ್ಲದೆ ಇದ್ದಾಗ ಸೊಸೆ ಲಕ್ಷ್ಮಮ್ಮ ಅದಕ್ಕೆ ಬಲಿಯಾಗಿ ಬಾಗಿಲು ನಿಲ್ಲುವಂತೆ ಮಾಡುತ್ತಾಳೆ ಆಗ ಆಕೆ ತುಂಬ ಗರ್ಭಿಣಿಯಾಗಿದ್ದಳು. ಇಲ್ಲಿ ಕೆಂಪೇಗೌಡ ಮತ್ತು ಅವರ ಕುಟುಂಬದ ವ್ಯಕ್ತಿತ್ವವನ್ನು ಮತ್ತು ಸಾಮಾಜಿಕ ಕಾಳಜಿಯನ್ನು ಚೇತರಿಸಲಾಗಿದೆ. ರಜಪೂತ ಲಕ್ಷ್ಮಿ ನಾಟಕದಲ್ಲಿ ಹಿಂದೂ– ಮುಸ್ಲಿಂ ಸಂಸ್ಕೃತಿಗಳ ಸಮ್ಮಿಲನ ಕಾಲದ ಘರ್ಷಣೆಯ ಚರಿತ್ರೆಯೇ ಈ ನಾಟಕದ ಕಥಾವಸ್ತು ಎಂದು ಇಲ್ಲಿ ವಿವರಿಸಲಾಗಿದೆ. ರಾಜ ನರ್ತಕಿ ನಾಟಕ ಭಾರತದ ಉತ್ತರ, ದಕ್ಷಿಣ ಸಂಸ್ಕೃತಿಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುತ್ತಿದ್ದರು ಅವೆರಡರ ಉಗಮ ಸ್ಥಾನ ಒಂದೇ ಅದು ಭಾರತ. ದಕ್ಷಿಣ ಉತ್ತರ ಸಂಸ್ಕೃತಿಯ ಸಾಮರಸ್ಯ ಸಮನ್ವಯವನ್ನೇ ಎತ್ತಿ ಹಿಡಿದಿರುವ ಈ ನಾಟಕ ಭಾರತೀಯ ಸಾಂಸ್ಕೃತಿಕ ಐಕ್ಯತೆಯನ್ನು ಸಾಧಿಸಲು ಸಹಾಯಕವಾಗಿದೆ.

ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ವಿರುದ್ಧ ಸಮರ ಸಾರಿದ ಪ್ರಥಮ ಮಹಿಳೆ 1824ರಲ್ಲಿ ಜಯಗಳಿಸಿದರು ಸಹ ಮಲ್ಲಪ್ಪಶೆಟ್ಟಿಯಂತಹ ರಾಜ್ಯದ್ರೋಹಿಗಳಿಂದಾಗಿ ಬ್ರಿಟಿಷರ ಕಪಟದಿಂದಾಗಿ ಸೆರೆಸಿಕ್ಕಿ ಬೈಲಹೊಂಗಲದ ಜೈಲಿನಲ್ಲಿ ಪ್ರಾಣ ಬಿಡುತ್ತಾಳೆ. ನಂತರ ಯುದ್ಧವನ್ನು ಸಂಗೊಳ್ಳಿ ರಾಯಣ್ಣ ಮುಂದುವರಿಸುತ್ತಾನೆ ಆದರೂ ಕಿತ್ತೂರು ಬ್ರಿಟಿಷರ ವಶವಾಗುತ್ತದೆ. ಇಲ್ಲಿ ಬ್ರಿಟಿಷ್ ಅಧಿಕಾರಿ ಠ್ಯಾಕರಿಯ ಅವಿವೇಕ, ರಾಣಿ ಚೆನ್ನಮ್ಮನ ಶೌರ್ಯ, ಸಂಗೊಳ್ಳಿ ರಾಯಣ್ಣನ ಸ್ವಾಮಿ ಭಕ್ತಿ, ಮಲ್ಲಪ್ಪಶೆಟ್ಟಿಯ ನೀಚತನ ನಾಟಕ ಕಳೆ ಕಟ್ಟುವಂತೆ ಮಾಡಿದೆ. ಹೀಗೆ ಪ್ರಕಟಿಶೀಲ ಸಾಹಿತ್ಯದ ಲೇಖಕರು ತಮ್ಮ ಸಾಹಿತ್ಯದಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ತರುವ ಮೂಲಕವಾಗಿ ವಾಸ್ತವ ಬದುಕಿನೊಂದಿಗೆ ಅನುಸಂಧಾನ ಏರ್ಪಡಿಸಲು ಪ್ರಯತ್ನಿಸುತ್ತಾರೆ.

**ಪರಾಮರ್ಶನ ಗ್ರಂಥಗಳು**


- ರಾಘವೇಂದ್ರ ರಾವ್ (2018). ಪ್ರಗತಿಶೀಲತೆ. ಕನ್ನಡ ಸಾಹಿತ್ಯ ಅಕಾಡೆಮಿ. ಅಭಿನವ ಪ್ರಕಾಶನ ವಿಜಯನಗರ.
- ತಾ.ರಾ.ಸು. (1982). ದುರ್ಗಾಸ್ತಮಾನ. ಹೇಮಂತ ಸಾಹಿತ್ಯ, ರಾಜಾಜಿನಗರ, ಬೆಂಗಳೂರು.
- ಅ.ನ.ಕೃ. (1988). ಕಿತ್ತೂರು ರಾಣಿ ಚೆನ್ನಮ್ಮ. ಅರಿವು ಪ್ರಕಾಶನ, ಬೆಂಗಳೂರು.
- ಅ.ನ.ಕೃ. (1988). ಬಸವೇಶ್ವರ. ಅರಿವು ಪ್ರಕಾಶನ, ಬೆಂಗಳೂರು.